ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು). —

(ಅ) ಬಂದಿದೆ.

(ಆ) ಸರ್ಕಾರವು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರಿಂದ ಕರಡು ವರದಿಯನ್ನು ದಿನಾಂಕ ೧೦-೨-೧೯೮೨ ರಲ್ಲಿ ಕೇಳಿದೆ.

* * *

ವಿಷಯ.—ರಾಜ್ಯದಲ್ಲಿರುವ ಉರ್ದು ಮಾಧ್ಯಮ ಸರ್ಕಾರಿ ಪ್ರೌಢ ಶಾಲೆಗಳು

೨೭೦ ಶ್ರೀ ಎಂ. ಎಂ. ನಡಾಫ್ (ಶಿಗಾಂವ್). — ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರಿ ಕಾಲೇಜು, ಸಾವಣೂರು ಧಾರವಾಡ ಜಿಲ್ಲೆಯಲ್ಲಿ ಉಪನ್ಯಾಸಕರು, ಲೈಬ್ರರಿಯನ್, ಕ್ಲರ್ಕ್ ಅಟೆಂಡರ್ ವಾಚಮ್ಯಾನ್‌ರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

(ಆ) ಎಂ.ಎಲ್.ಎ. ಹಾಗೂ ಪ್ರಾಚಾರ್ಯರಿಂದ ಖಾಲಿ ಇರುವ ಹುದ್ದೆಯ ಬಗ್ಗೆ ಭರ್ತಿ ಮಾಡಲು ಪತ್ರಗಳು ಬಂದಿವೆಯೇ ;

(ಇ) ಖಾಲಿ ಇರುವ ಹುದ್ದೆಯ ಬಗ್ಗೆ ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ (ಸಾವಣೂರು ಸರ್ಕಾರಿ ಕಿರಿಯ ಕಾಲೇಜಿನಲ್ಲಿ)

(ಆ) ಬಂದಿವೆ

(ಇ) ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

* * *

ವಿಷಯ.—ಹಗರಿ ಬೊಮ್ಮನ ಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ತರಗತಿ ಕೊಠಡಿಗಳಿಗೆ ಸ್ಥಳಾವಕಾಶದ ಕೊರತೆ.

೧೧೨ ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಿಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯಲ್ಲಿರುವ ಬಿ. ಬಿ. ಸರ್ಕಾರಿ ಪ್ರೌಢ ಶಾಲೆ ಕಿರಿಯ ಮಹಾವಿದ್ಯಾಲಯ ಇದಕ್ಕೆ ೧೧ ಕೊಠಡಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳು ಏನು :

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಹೌದು

(ಆ) ಹೆಚ್ಚಿನ ಕೊಠಡಿಗಳ ನಿರ್ಮಾಣಕ್ಕೆ ೧೯೮೪-೮೫ ರಲ್ಲಿ ಹಣ ಒದಗಿಸಲು ಪ್ರಯತ್ನಿಸಲಾಗುವುದು.

ಶ್ರೀ ಕೆ. ಚನ್ನಬಸವನ ಗೌಡ —ಮಾನ್ಯ ಅಧ್ಯಕ್ಷರೇ, ಪ್ರೌಢಶಾಲೆಯನ್ನು ಕಿರಿಯ ಮಹಾವಿದ್ಯಾಲಯವನ್ನಾಗಿ ಮಾಡಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದು ಬಹಳ ತೊಂದರೆ ಯಾಗಿದೆ; ಹಂಗಾಮಿಯಾಗಿ ಹೆಡ್ಡಾಗಳನ್ನು ಹಾಕಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

---

* ಮಾನ್ಯ ಸದಸ್ಯರು ಗೈರುಹಾಜರಿ

ಶ್ರೀ ಬಿ. ರಾಚಯ್ಯ.—ಈಗ ಅಲ್ಲಿ ೯ ಕೊಠಡಿಗಳು ಪ್ರೌಢ ಶಾಲೆಗೆ ಇವೆ. ಶಾಲಾ ಸುಧಾರಣಾ ಸಮಿತಿಯವರು ದೇಣಿಗೆ ರೂಪದಲ್ಲಿ ಕೊಟ್ಟಂಥ ಕಟ್ಟಡಗಳಲ್ಲಿ ಕಿರಿಯ ಮಹಾವಿದ್ಯಾಲಯ ನಡೆಯುತ್ತಿದೆ. ೧೯೮೪–೮೫ ರಲ್ಲಿ ೮–೯–೧೦ ಹೀಗೆ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಎನ್.ಆರ್.ಇ.ಪಿ. ಯೋಜನೆಯಲ್ಲಿ ಏರ್ಪಾಡು ಮಾಡುತ್ತೇವೆ.

ಶ್ರೀ ಕೆ. ಚನ್ನಬಸವನ ಗೌಡ.—ತಾತ್ಕಾಲಿಕವಾಗಿ ಪೆಡ್ಡುಗಳನ್ನು ಹಾಕಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ತಾತ್ಕಾಲಿಕವಾಗಿ ಪೆಡ್ಡುಗಳನ್ನು ಹಾಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ : ೪೬೫ (೩೧೮) ಸದಸ್ಯರು ಗೈರು ಹಾಜರಿ.

ಪ್ರಶ್ನೆ : ೪೬೭ (೨೭೬) ಸದಸ್ಯರು ಗೈರು ಹಾಜರಿ.

ಪ್ರಶ್ನೆ : ೪೬೬ (೧೯೧) ಸದಸ್ಯರು ಗೈರು ಹಾಜರಿ.

ಪ್ರಶ್ನೋತರ : ೪೬೮ (೨೧೩)

ಮುಂಧೋಳ್ ತಾಲ್ಲೂಕಿನಲ್ಲಿ ಪೂರಕ ಅನುದಾನದ ಪಂಜೂರಾತಿ

೨೧೩. ಶ್ರೀ ವಿ. ಕೆ. ಕಟ್ಟಿಮನಿ (ಮುಂಧೋಳ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ;

ಅ) ಬಿಜಾಪುರ ಜಿಲ್ಲೆ ಮುಂಧೋಳ ತಾಲ್ಲೂಕಿನ ಮಂಟೂರು ಬಿದ್ರಿ, ಮುಗಳುಕೊಡ, ಲೋಕಾಪುರ ಮತ್ತು ಹೆಬ್ಬಾಳ ಪಂಚಾಯತಿಗಳಲ್ಲಿ ಶೇ ೫೦ ಕ್ಕಿಂತಲೂ ಹೆಚ್ಚು ತೆರಿಗೆ ವಸೂಲಿ ಮಾಡಿದಾಗ್ಯೂ ೧೯೮೨ರಲ್ಲಿ ಸರಕಾರದಿಂದ ಕೊಡಬೇಕಾದ ಪೂರಕ ಹಣವನ್ನು (ಮ್ಯಾಚಿಂಗ್ ಗ್ರ್ಯಾಂಟ್) ಮಂಜೂರು ಮಾಡದಿರುವುದು ನಿಜವೆ, ಹಾಗಿದ್ದಲ್ಲಿ ಹೀಗೆ ಮಾಡಿರುವುದಕ್ಕೆ ಕಾರಣಗಳೇನು.

ಆ) ಪ್ರಸ್ತುತ ಸಾಲಿನಲ್ಲಿ ಬಿಜಾಪುರ ಜಿಲ್ಲೆ ಮುಂಧೋಳ ತಾಲೂಕಿನ ೨೫ ಪಂಚಾಯತಿಗಳ ಪೈಕಿ ೨೦ ಪಂಚಾಯತಿಗಳು ಶೇ. ೧೦೦ ರಷ್ಟು ಹಾಗೂ ೫ ಪಂಚಾಯತಿಗಳು ಶೇ. ೬೦ ಕ್ಕೂ ಮೇಲ್ಪಟ್ಟು ಕರ ವಸೂಲಿ ಮಾಡಿದಾಗ್ಯೂ ಈವರೆಗೆ ಸರಕಾರದವರು ಪೂರಕ ಹಣ(ಮ್ಯಾಚಿಂಗ್ ಗ್ರ್ಯಾಂಟ್)ಕೊಡದೇ ಇದ್ದಿದ್ದು ನಿಜವೆ.

ಇ) ಹಾಗಿದ್ದಲ್ಲಿ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ನಿಜ.—ಮ್ಯಾಚಿಂಗ್ ಗ್ರ್ಯಾಂಟನ್ನು ಸುತ್ತೋಲೆ ಕ್ರಮಾಂಕ ಆರ್‌ಡಿಸಿ ೧೧೯ ವಿಎಸಿ ೮೦ರ ಪ್ರಕಾರ ಶೇ. ೨೫ ಕ್ಕಿಂತ ಕಡಿಮೆ ತೆರಿಗೆ ವಸೂಲಿ ಮಾಡಿದ ಕಾರಣ ಬಿಜಾಪುರ ಜಿಲ್ಲೆಗೆ ಕೊಡಲಾಗಲಿಲ್ಲ.

ಆ) ೧೯೮೩–೮೪ನೇ ಸಾಲಿನ ಮ್ಯಾಚಿಂಗ್ ಗ್ರ್ಯಾಂಟನ್ನು ಇನ್ನೂ ಮಂಜೂರು ಮಾಡಿರುವುದಿಲ್ಲ.

ಇ) ಪ್ರಸ್ತುತ ಸಾಲಿನ ಮ್ಯಾಚಿಂಗ್ ಗ್ರ್ಯಾಂಟನ್ನು ಸರಕಾರದ ಆಯವ್ಯಯದ ಬೇಡಿಕೆಗಳು ಪೂರ್ಣವಾಗಿ ಮಂಜೂರಾಗದೇ ಇರುವ ಕಾರಣದಿಂದ ಯಾವ ಜಿಲ್ಲೆಗಳಿಗೂ ಮಂಜೂರು ಮಾಡಿಲ್ಲ.

ಶ್ರೀ ವಿ. ಕೆ. ಕಟ್ಟೀಮನಿ.—ಸ್ವಾಮಿ, ಆದಷ್ಟು ಬೇಗ ಮ್ಯಾಚಿಂಗ್ ಗ್ರ್ಯಾಂಟ್ ಮಂಜೂರು ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಮ್ಮ ಜಿಲ್ಲೆಯಲ್ಲಿ ೫೦ ರಷ್ಟು ವಸೂಲಿ ಮಾಡಿದ್ದರೆ, ಈ ಬಡ್ಜೆಟ್ ಅಧಿವೇಶನ ಆದಮೇಲೆ ಕೊಡುತ್ತೇನೆ.